ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಪಿ. ಬಸವರಾಜ್ : (ಶ್ರೀ ಜೆ.ಎಸ್. ಆಚಾರ್‌ರವರ ಪರವಾಗಿ ಅರ್ಜಿಗಳನ್ನು ಒಪ್ಪಿಸಿದರು)

ಮಾನ್ಯ ಅಧ್ಯಕ್ಷರೇ, 1) ಕುಂದಾಪುರ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಆಗದಿರುವ ಬಗ್ಗೆ,

2) ಶ್ರೀ ಶಂಕರ ಹನುಮಂತ ಕರಸಿಂಗ್‌ರವರು ಅನುಕಂಪದ ಆಧಾರದ ಮೇಲೆ ರಾಯಚೂರಿನ ಪಾಲಿಟೆಕ್ನಿಕ್‌ನಲ್ಲಿ ಎರಡನೇ ದರ್ಜೆ ಹುದ್ದೆ ನೀಡುವ ಬಗ್ಗೆ, ಅರ್ಜಿಗಳನ್ನು ಒಪ್ಪಿಸುತ್ತೇವೆ.

ವೈಸ್ ಚೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಶಿರಾ ತಾಲ್ಲೂಕಿನಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ವೈಸ್ ಚೇರ್ಮನ್ : ಅರ್ಜಿಗಳನ್ನು ಮಂಡಿಸಲಾಯಿತು.

ದ. ಅ॥ ವರದಿಯ ಪರಿಶೀಲನಾ ಸೂಚನೆ

Shri V.S. Koujalgi : I beg to move :

"That the First Report of the Privileges Committee presented on 26-2-92 be taken into consideration.

ವೈಸ್ ಚೇರ್ಮನ್ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

ವಿಷಯ : ಕುಖ್ಯಾತ ಕಳ್ಳ ಸಾಗಾಣಿಕೆದಾರ ದಂತಚೋರ ಮತ್ತು ಆನೆ ಹಂತಕ ವೀರಪ್ಪನನ್ನು ಬಂಧಿಸುವ ಬಗ್ಗೆ.

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ) : ಮಾನ್ಯ ಅಧ್ಯಕ್ಷೆಣಿಯವರೆ, ಕುಖ್ಯಾತ ಕಳ್ಳಸಾಗಾಣಿಕೆದಾರ, ದಂತಚೋರ, ಆನೆ ಹಂತಕ ವೀರಪ್ಪನ್‌ನ್ನು ಬಂಧಿಸುವ ಬಗ್ಗೆ ಮಾನ್ಯ ಗೃಹ ಮತ್ತು ಅಬಕಾರಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಧರ್ಮಸಿಂ (ಗೃಹ ಮತ್ತು ಅಬ್ಕಾರಿ ಸಚಿವರು)

ವೀರಪ್ಪನ್ ಮತ್ತು ಅವನ ತಂಡದ ಸದಸ್ಯರನ್ನು ಹಿಡಿಯಲು ಕರ್ನಾಟಕ ಮತ್ತು ತಮಿಳುನಾಡು ರಾಜ್ಯದ ಪೊಲೀಸ್ ಮತ್ತು ಅರಣ್ಯ ಇಲಾಖೆ, 1990ನೇ ಸಾಲಿನ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ, ವಿಶೇಷ ಕಾರ್ಯಾಚರಣೆ ಪ್ರಾರಂಭ ಮಾಡಿದರು. ಇದರ ಫಲಿತಾಂಶವಾಗಿ ಅನೇಕ ಲಕ್ಷ ರೂಪಾಯಿ ಬೆಲೆ ಬಾಳುವ ಅಕ್ರಮವಾಗಿ ಸಂಗ್ರಹಿಸಿದ್ದ ಗಂಧದ ಮರವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ, ಏಪ್ರಿಲ್ 1990ರಲ್ಲಿ ವೀರಪ್ಪನ್ ತಂಡದವರು ಕರ್ನಾಟಕದ 4 ಜನ ಪೊಲೀಸ್ ಅಧಿಕಾರಿಗಳ ಕೊಲೆ ಮಾಡಿದರು. 18-4-90ರಿಂದ, ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯ ಅಧಿಕಾರಿಯ ನೇತೃತ್ವದಲ್ಲಿ, ಕರ್ನಾಟಕ ಸರಕಾರ ಪೊಲೀಸ್ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಸೇರಿಸಿ ಒಂದು ವಿಶೇಷ ಪಡೆಯನ್ನು ಹಿಡಿಯುವ ಕಾರ್ಯವನ್ನು ಇನ್ನಷ್ಟು ತೀವ್ರಗೊಳಿಸಲಾಯಿತು. ಈ ತಂಡದ ಕಾರ್ಯಫಲವಾಗಿ ವೀರಪ್ಪನ್ ತಂಡದ ಅನೇಕ ಜನರನ್ನು ಕರ್ನಾಟಕದಲ್ಲಿ ಬಂಧಿಸಲ್ಪಟ್ಟವರಲ್ಲಿ 53 ಜನರು ಈ ತಂಡದ ಮುಖ್ಯ ಸದಸ್ಯರಾಗಿದ್ದರು. ಕಾರ್ಯಾಚರಣೆ ಮುಂದುವರಿದಂತೆ, ಆಗಸ್ಟ್ 1991ರಲ್ಲಿ ಈ ತಂಡದ ಇನ್ನೆರಡು ಮುಖ್ಯ ಸದಸ್ಯರನ್ನು ಬಂಧಿಸಲಾಯಿತು.

ವೀರಪ್ಪನ್ ಮತ್ತು ತಂಡದವರನ್ನು ಹಿಡಿಯುವ ಪ್ರಯತ್ನ ನಡೆಯುತ್ತಿದ್ದಂತೆಯೇ, ನವೆಂಬರ್ 1991ರಲ್ಲಿ ಈ ತಂಡದವರು, ಡಪ್ಯೂಟಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಶ್ರೀನಿವಾಸ್ ಅವರನ್ನು ಕೊಲೆ ಮಾಡಿದ ವಿಷಾದದ ಘಟನೆ ನಡೆಯಿತು. ವೀರಪ್ಪನ್ ಮತ್ತು ತಂಡದವರನ್ನು ಹಿಡಿಯುವ ಬಗ್ಗೆ ಇನ್ನು ಹೆಚ್ಚಿನ ರೀತಿಯ ಕಾರ್ಯಾಚರಣೆ ನಡೆಸಲು ರಾಜ್ಯ ಸರಕಾರ ಕೂಡಲೇ ತೀವ್ರ ಕ್ರಮ ಕೈಗೆದುಕೊಂಡಿತು. ತಾರೀಖು 20-11-91ರಂದು ತಮಿಳುನಾಡು, ಕೇರಳ ಮತ್ತು ಕರ್ನಾಟಕ ರಾಜ್ಯಗಳ ಸಂಬಂಧಪಟ್ಟ